

# ಶಾವಿಗೆ ಶಾಮಣ್ಣಾ

ಟಿ.ಆರ್. ಉಷಾರಾಣಿ
ಕಲೆ: ಸಂತೋಷ್ ಸಸಿಹಿತ್ಲು

ಒಂದೂರಿನಲ್ಲಿ ಶಾಮಣ್ಣಾ ಎಂಬ ಮಧ್ಯಮವರ್ಗದ ಸಜ್ಜನನಿದ್ದ. ಇದ್ದುದುದರಲ್ಲಿ ತೃಪ್ತಿಯಿಂದ ಜೀವನ ಸಾಗಿಸುತ್ತಿದ್ದ. ಹಂಚಿ ತಿನ್ನುವುದರಲ್ಲಿ ನಂಬಿಕೆ ಇಟ್ಟಿದ್ದ. ಅವನು ಶಾವಿಗೆ ಮಾಡುವುದರಲ್ಲಿ ನಿಸ್ಸೀಮ. ಶಾವಿಗೆ ಮಾಡಿ ತನ್ನ ಪರಿಚಿತರನ್ನೆಲ್ಲಾ ಕರೆದು ಔತಣವೇರ್ಪಡಿಸುತ್ತಿದ್ದ. ಊರಿನಲ್ಲಿ ಅವನನ್ನು ಎಲ್ಲರೂ ಶಾವಿಗೆ ಶಾಮಣ್ಣಾ ಎಂದೇ ಕರೆಯುತ್ತಿದ್ದರು. ಕೆಲವೊಮ್ಮೆ ಅತಿಥಿಗಳ ಆಗಮನ ಮತ್ತು ಅವರಿಗೆ ಶಾಮಣ್ಣಾ ಮಾಡುತ್ತಿದ್ದ ಉಪಚಾರದಿಂದಾಗಿ ಅವನ ಹೆಂಡತಿಗೇ ಶಾವಿಗೆ ಮಿಕ್ಕುತ್ತಿರಲಿಲ್ಲ. ಒಂದು ಏಕಾದಶಿಯ ದಿನ ಶಾವಿಗೆ ಮಾಡುವುದೆಂದು ಶಾಮಣ್ಣಾ ನಿರ್ಧರಿಸಿದ್ದ. ಈ ಸಲ ಅತಿಥಿ ಅಭ್ಯಾಗತರಿಗೆ ಶಾವಿಗೆ ಸಂತರ್ಪಣೆ ಇಲ್ಲ. ತಾವಿಬ್ಬರೆ ಕುಳಿತು ಶಾವಿಗೆ, ಅದರೊಂದಿಗೆ ಕಾಯಿ ಹಾಲಿನ ಗಸಗಸೆ ಪಾಯಸ, ಕಾಯಿ ಬೆಲ್ಲ, ಎಳ್ಳು ಸೂಸಲು ತಿನ್ನುವುದೆಂದು ಗಂಡನಿಗೆ ಅವನ ಹೆಂಡತಿ ಮೊದಲೇ ತಾಕೀತು ಮಾಡಿದ್ದಳು.

ಶಾಮಣ್ಣನಿಗೆ ಸರಿಕಾಣಿಸಲಿಲ್ಲ. ಅತಿಥಿಗಳಿಗೆ ಬಡಿಸದೆ ತಿನ್ನುವುದೇ ಎಂದು. ಆದರೂ ಹೆಂಡತಿಯ ಮಾತಿಗೆ ಬದಲಾಡದೆ ಒಪ್ಪಿಕೊಂಡ. ಶಾಮಣ್ಣನ ಮನೆಯಿಂದ ಘಮಘಮ ಪರಿಮಳ ಗಾಳಿಯಲ್ಲಿ ತೇಲಿ ತೇಲಿ ಬಂದದ್ದೇ ತಡ ಅವನ ಸ್ನೇಹಿತರೆಲ್ಲಾ ಒಬ್ಬೊಬ್ಬರಾಗಿ ಹುಡುಕಿಕೊಂಡು ಬಂದರು. 'ಏನು ಶಾಮಣ್ಣಾ ಶಾವಿಗೆ ತಯಾರಾಗುತ್ತಿರುವಂತಿದೆ. ನಮಗೆ ಈಗಲೇ ಬಾಯಲ್ಲಿ ನೀರೂರುತ್ತಿದೆ' ಎಂದಾಗ ಶಾಮಣ್ಣನ ಹೆಂಡತಿ 'ಏಯ್ ಈ ದಿನ ಏಕಾದಶಿ ಅಲ್ಲವೇ ಶಾವಿಗೆ ಇರಲಿ ಒಂದುತೊಟ್ಟು ನೀರೂ ಬಾಯಿಗೆ ಹಾಕುವಂತಿಲ್ಲ, ಶಾವಿಗೆ ಮಾಡಿದರೆ ನಿಮಗೆ ಹೇಳಿ ಕಳಿಸುವುದಿಲ್ಲವೇ?' ಎಂದಾಗ ಎಲ್ಲರೂ ನಿರಾಶರಾಗಿ ತಮ್ಮ ಮನೆಕಡೆ ದಾರಿ ಹಿಡಿದರು. ಶಾವಿಗೆ ಎಲ್ಲಾ ತಯಾರಾದ ಮೇಲೆ ಅಡುಗೆ ಮನೆಯಲ್ಲಿ ಮುಚ್ಚಿಟ್ಟು ಶಾಮಣ್ಣಾ ಮನೆಯ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿದ. ಕಳ್ಳನೊಬ್ಬ ಇವನ ಮನೆಯ ಮುಂದೆ ಸಾಗಿ ಹೋಗುತ್ತಿದ್ದ. ಅವನಿಗೆ ಆ ದಿನ ಕಳ್ಳತನ ಮಾಡಲು ಏನೂ ಸಿಕ್ಕಿರಲಿಲ್ಲ, ಜೊತೆಗೆ ಹೊಟ್ಟೆ ತುಂಬಾ ಹಸಿಯುತ್ತಿತ್ತು. ಇವರ ಮನೆಯಿಂದ ಹೊರಹೊಮ್ಮಿದ ಪರಿಮಳಕ್ಕೆ ಮನಸೋತು ಅವರ ಮನೆಯ ಕದ ತಟ್ಟಿ ಹಿಂದೆ ಅಡಗಿ ನಿಂತ. ಶಾಮಣ್ಣನ ಹೆಂಡತಿಗೆ ಸಿಟ್ಟು ನೆತ್ತಿಗೇರಿತು. 'ನಿಮ್ಮ ಸ್ನೇಹಿತರು ಬಂದು ಎಲ್ಲಾ ಖಾಲಿ ಮಾಡುವುದರೊಳಗಾಗಿ ನಾವು ತಿಂದು ಮುಗಿಸಬೇಕು. ಇಲ್ಲದೆ ಇದ್ದರೆ ನನಗೆ ಚಿಕ್ಕನಾಯಕನಹಳ್ಳಿ ಚಿಪ್ಪೇ ಗತಿ, ನೋಡಿ ಯಾರೋ ಬಾಗಿಲು ತಟ್ಟುತ್ತಿದ್ದಾರೆ ಅವರಿಗೆ ಹೇಳಿ ಈ ದಿನ ಏಕಾದಶಿ ಉಪವಾಸ ಅಂತಾ' ಎಂದು ವಟಗುಟ್ಟಿದಳು.

ಶಾಮಣ್ಣನಿಗೆ ತನ್ನ ಗೆಳೆಯರಲ್ಲಿ ಒಬ್ಬರಾದರೂ ಬಂದು ತನ್ನ ಕೈ ರುಚಿ ನೋಡಲಿ ಎಂದು ಇಷ್ಟ. ಬಾಗಿಲು ತೆರೆದರೂ ಯಾರೂ ಕಾಣಲಿಲ್ಲ. ಸುತ್ತಮುತ್ತಾ ನೋಡಿ ಏರಿಯ ಮೇಲೆ ನಿಂತು ಯಾರಾದರೂ ಹಿತೈಷಿಗಳು ಬಂದಿದ್ದರೇ ಎಂದು ನೋಡುತ್ತಿದ್ದಾಗ ಕಳ್ಳ ಮೆಲ್ಲನೆ ಮನೆಯೊಳಗೆ ನುಸುಳಿಕೊಂಡು ಕಳ್ಳ ಹೆಜ್ಜೆಗಳನ್ನಿಡುತ್ತಾ ಅಡುಗೆಮನೆಗೆ ಹೋಗಿ ಶಾವಿಗೆ, ಅದಕ್ಕೆ ಸಂಬಂಧಪಟ್ಟ ಎಲ್ಲ ಸಿಹಿಯನ್ನೂ ತೆಗೆದುಕೊಂಡು ಅವರ ಮನೆಯ ಅಟ್ಟ ಹತ್ತಿ ಕುಳಿತುಬಿಟ್ಟ. ಶಾಮಣ್ಣಾ ಮನೆಯ ಒಳಗೆ ಬರುತ್ತಲೇ ಹೆಂಡತಿ ಅವನೊಂದಿಗೆ ಜಗಳ ಶುರು ಮಾಡಿದಳು. ಇವರಿಬ್ಬರೂ ಜಗಳ ಆಡುತ್ತಿದ್ದಾಗ ಅಟ್ಟ ಹತ್ತಿ ಕುಳಿತಿದ್ದ ಕಳ್ಳ ಆನಂದವಾಗಿ ಪರಿಕರಗಳೊಂದಿಗೆ ಶಾವಿಗೆಯನ್ನು ಚಪ್ಪರಿಸಿಕೊಂಡು ತಿಂದು ಮುಗಿಸಿದ. ಪಾತ್ರೆಗಳನ್ನು ಶಬ್ದವಾಗದಂತೆ ಪಕ್ಕಕ್ಕಿಟ್ಟು ಹೊರಗೆ ಹೋಗುವ ದಾರಿ ಕಾಯುತ್ತಿದ್ದ. ಅಡುಗೆ ಮನೆಯಲ್ಲಿ ಶಾವಿಗೆ ಕಾಣದೆ ಇದ್ದಾಗ ಓಹೋ ತಾನು ಹೊರಗೆ ಹೋಗಿದ್ದಾಗ ಹೆಂಡತಿ ಎಲ್ಲವನ್ನೂ ತಿಂದು ಮುಗಿಸಿದ್ದಾಳೆ ಎಂದು ಹೆಂಡತಿಯನ್ನು ಶಪಿಸುತ್ತಾ ಈ ದಿನ ಏಕಾದಶಿಯ ಉಪವಾಸವೇ ಗತಿ ಎಂದುಕೊಂಡು ಹೊರಗೆ ಬಂದು ಕುಳಿತ. ಹೆಂಡತಿ 'ಓಹೋ ಗಂಡ ತನಗೆ ತಿಳಿಯದಂತೆ ಶಾವಿಗೆಯನ್ನು ತನ್ನ ಸ್ನೇಹಿತರಿಗೆ ಕೊಟ್ಟು ಕಳಿಸಿಬಿಟ್ಟಿದ್ದಾನೆ ಈ ದಿನ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳಬೇಕು' ಎಂದು ಗಂಡನನ್ನು ಬೈದುಕೊಳ್ಳುತ್ತಾ ಬಂದು ಕುಳಿತಳು. ಶಾವಿಗೆ ಮುಕ್ಕಿದ್ದ ಕಳ್ಳನಿಗೆ ಬಿಕ್ಕಳಿಕೆ ಬಂದುಬಿಟ್ಟಿತು. ಎಷ್ಟು ಉಸಿರು ಬಿಗಿ ಹಿಡಿದರೂ ಅವನಿಗೆ ತಡೆದುಕೊಳ್ಳಲು ಸಾಧ್ಯವಾಗಲೇ ಇಲ್ಲ.

ಶಬ್ದ ಕೇಳಿ ಗಂಡ ಹೆಂಡತಿ ಇಬ್ಬರೂ ನೋಡುವುದೇನು ಪಿಳಿ ಪಿಳಿ ಕಣ್ಣು ಬಿಡುತ್ತಾ ಅಟ್ಟದ ಮೇಲೆ ಕುಳಿತು ಕಳ್ಳ ಬಿಕ್ಕಳಿಸುತ್ತಿದ್ದಾನೆ. ಕೊನೆಗೆ ಒಬ್ಬರಿಗಾದರೂ ಶಾವಿಗೆ ದಕ್ಕಿತಲ್ಲಾ ಎಂದು ಶಾಮಣ್ಣಾ ಸಂತೋಷಪಟ್ಟು ಕಳ್ಳನಿಗೆ ನೀರು ಕೊಟ್ಟು, 'ತಮ್ಮಿಂದ ಬಹೂಪಕಾರವಾಯ್ತು ಸ್ವಾಮಿ ಈ ದಿನ ಶಾವಿಗೆಯನ್ನು ತಿನ್ನಲು ಯಾರಿಗೂ ಕೊಡಲಿಲ್ಲವಲ್ಲ ಎಂದು ತುಂಬಾ ಬೇಸರವಾಗಿತ್ತು. ಬನ್ನಿ ಕೆಳಗೆ ಬನ್ನಿ. ನೀವೇ ಈ ದಿನದ ಅತಿಥಿ' ಎಂದು ಕೈಮುಗಿದುಕೊಂಡು ವಿನಯದಿಂದ ಕರೆದರೆ, ಕಳ್ಳನಿಗೆ ಆಶ್ಚರ್ಯ, ತನಗೆ ಮರ್ಯಾದೆಯೇ? ಎಂದುಕೊಂಡು ಖಾಲಿ ಪಾತ್ರೆಯನ್ನು ಶಾಮಣ್ಣನಿಗೆ ಕೊಟ್ಟ. ಕೊನೆಗೂ ತನಗೆ ಶಾವಿಗೆ ದಕ್ಕಲಿಲ್ಲವಲ್ಲ ಎಂದು ಅವನ ಹೆಂಡತಿ ಪೊರಕೆ ಹಿಡಿದುಕೊಂಡು ಅವನು ಅಟ್ಟದಿಂದ ಕೆಳಗಿಳಿಯುವುದನ್ನೇ ಕಾಯುತ್ತಿದ್ದವಳು ಗಂಡನನ್ನೂ ಸೇರಿಸಿ ಕಳ್ಳನಿಗೆ ಚೆನ್ನಾಗಿ ಬಾರಿಸಿಬಿಟ್ಟಳು. ಕಳ್ಳ ಸತ್ತೆನೋ ಬಿದ್ದೆನೋ ಎಂದು ಓಡಿ ಹೋದ. ಇಬ್ಬರ ಜಗಳ ಮೂರನೆಯವರಿಗೆ ಲಾಭವಾಯಿತು. ■